**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

**ಸತ್ರ ಮೊಕದ್ದಮೆ ನಂಃ 95/2024**

| | | |
|---|---|---|
| ಸಾಕ್ಷಿದಾರರ ಹೆಸರು | - ಪ್ರಮೋದ್ | ಪಿಡಬ್ಲೂ - 17 |
| ತಂದೆಯ ಹೆಸರು | - ಲಕ್ಷ್ಮಣಗೌಡ | ಸಿಡಬ್ಲೂ - 20 |
| ವಯಸ್ಸು | - 41 ವರ್ಷ | |
| ಉದ್ಯೋಗ | - ಮುಖ್ಯ ಪೇದೆ 368, ಕಳಸ ಪೊಲೀಸ್ ಠಾಣೆ | |
| ವಾಸ ಸ್ಥಳ | - ಕಳಸ | |

(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)

ದಿನಾಂಕಃ 05-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ಮೇ 2022 ರಿಂದ ಆಗಸ್ಟ್ 2024 ರವರೆಗೆ ನಾನು ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆ 368 ಆಗಿ ಕಾರ್ಯ ನಿರ್ವಹಿಸಿದ್ದೇನೆ.

2. ಚಾಸಾ.21 ರವರು ಗೊತ್ತು. ದಿಃ 09-05-2024 ರಂದು ನನ್ನನ್ನು ರಾತ್ರಿ ಪಾಳಿಯ ಠಾಣಾಧಿಕಾರಿಯ ಕರ್ತವ್ಯಕ್ಕೆ ನೇಮಿಸಿದ್ದರು. ಅದರಂತೆ ನಾನು ಆ ದಿನ ರಾತ್ರಿ 9 ಗಂಟೆಗೆ ಠಾಣೆಗೆ ಹಾಜರಾಗಿ ಠಾಣಾಧಿಕಾರಿಯ ಕರ್ತವ್ಯದಲ್ಲಿದ್ದೆನು. ಚಾಸಾ.21 ರವರು ರಾತ್ರಿ ಗಸ್ತು ಸಿಬ್ಬಂದಿಗಳ ತಪಾಸಣೆ ಕರ್ತವ್ಯಕ್ಕಾಗಿ ಬಂದು ದಿನಚರಿಯಲ್ಲಿ ನಮೂದು ಮಾಡಿ ಗಸ್ತು ಸಿಬ್ಬಂದಿಗಳ ತಪಾಸಣೆಗಾಗಿ ಠಾಣೆಯಿಂದ ಹೋದರು. ನಾನು ಠಾಣಾಧಿಕಾರಿಯ ಕರ್ತವ್ಯವನ್ನು ಮುಂದುವರೆಸಿದೆನು.

3. ದಿನಾಂಕಃ 10-05-2024 ರಂದು ಬೆಳಗಿನ ಜಾವ ಸುಮಾರು 2.30 ಗಂಟೆಗೆ ನಮ್ಮ ಠಾಣೆಯ ದೂರವಾಣಿಗೆ ಯಾರೋ ಸಾರ್ವಜನಿಕರು ಕರೆ ಮಾಡಿ ಚಿಕ್ಕಮಗಳೂರು ನಗರ ಐ.ಜಿ. ರಸ್ತೆಯ ಸುಪ್ರೀಂ ಮೆಡಿಕಲ್ ಹತ್ತಿರ ಫುಟಪಾತ್ ರಸ್ತೆಯಲ್ಲಿ ಕೊಲೆ ನಡೆದಿರುವ ಬಗ್ಗೆ ಮಾಹಿತಿ ನೀಡಿದರು. ಆಗ ನಾನು ಕೂಡಲೇ ರಾತ್ರಿ ಗಸ್ತು ಸಿಬ್ಬಂದಿಗಳ ತಪಾಸಣೆ ಕರ್ತವ್ಯಕ್ಕೆ ಹೋಗಿದ್ದ ಚಾಸಾ.21 ರವರಿಗೆ ವೈರಲೆಸ್ ಮುಖಾಂತರ ಮಾಹಿತಿ ನೀಡಿ ಸ್ಥಳಕ್ಕೆ ಹೋಗುವಂತೆ ಕೇಳಿಕೊಂಡೆನು. ನಾನು ಸಹ ಕೂಡಲೇ ಮಾಹಿತಿ ಬಂದ ಸ್ಥಳಕ್ಕೆ ಹೋದೆನು.

4. ನಾನು ಅಲ್ಲಿಗೆ ಹೋಗುವಷ್ಟರಲ್ಲಿ ಚಾಸಾ.21 ರವರು ಅಲ್ಲಿಗೆ ಬಂದಿದ್ದರು, ಅಲ್ಲಿ ಸಾರ್ವಜನಿಕರು ನೆರೆದಿದ್ದರು, ಫುಟಪಾತ್ ರಸ್ತೆಯಲ್ಲಿ ರಕ್ತದ ಕಲೆಗಳಿರುವುದು ಕಂಡುಬಂತು ಮತ್ತು ಒಬ್ಬ ಹೆಂಗಸಿನ ಮೃತ ದೇಹ ಇತ್ತು. ಅಲ್ಲಿ ನೆರೆದಿದ್ದ ಸಾರ್ವಜನಿಕರನ್ನು ವಿಚಾರಿಸಿದಾಗ ಅವರು, ಸದರಿ ಫುಟಪಾತಿನ ಮೇಲೆ ಮಲಗಿದ್ದ

ಒಬ್ಬ ಬಿಕ್ಷುಕಿಯ ತಲೆಯ ಮೇಲೆ ಪೂರ್ಣೇಶ್ ಎಂಬಾತ ಕಲ್ಲನ್ನು ಎತ್ತಿ ಹಾಕಿ ಕೊಲೆ ಮಾಡಿದ್ದಾಗಿ ತಿಳಿಸಿದರು. ಸಾರ್ವಜನಿಕರು ಸದರಿ ಪೂರ್ಣೆಶನನ್ನು ಹಿಡಿಯಲು ಹೋದಾಗ ಆತ ತಪ್ಪಿಸಿಕೊಂಡು ಹೋಗಿದ್ದಾಗಿ ಅವರು ತಿಳಿಸಿದರು. ಚಾಸಾ.21 ರವರಿಗೆ ಸದರಿ ಪೂರ್ಣೇಶನ ಮುಖ ಪರಿಚಯ ಇದ್ದ ಕಾರಣ ನಾನು ಮತ್ತು ಅವರು ಆತನನ್ನು ಪತ್ತೆ ಮಾಡಲು ಆತನನ್ನು ಹುಡುಕಿ ನೋಡಿದೆವು, ಆದರೆ ಆತ ನಮಗೆ ಸಿಗಲಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರವರ ಕೋರಿಕೆಯ ಮೇರೆಗೆ ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇ.ಎ.ಒ.
ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ